# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1082** |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 29.09.2020. |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಲಾಕ್‌ಡೌನ್ ಸಮಯದಲ್ಲಿ ಗ್ಯಾಸ್ ಕಂಪನಿಗಳಿಗೆ ಯಾವ ರೀತಿಯ ಸೌಕರ್ಯ ಒದಗಿಸಲಾಗಿತ್ತು; | ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರವು ತೈಲ ಕಂಪನಿಗಳೊಂದಿಗೆ ಸಮನ್ವಯ ಸಾಧಿಸಿ ಅನಿಲ ಸಿಲಿಂಡರ್/ ಇಂಧನ ಸಾಗಿಸುವ ಟ್ರಕ್‌ಗಳು/ ಬೃಹತ್ ಟ್ಯಾಂಕರ್‌ಗಳ ಸುಗಮ ಸಂಚಾರಕ್ಕಾಗಿ ರಸ್ತೆ ಪಾಸ್‌ಗಳನ್ನು ಒದಗಿಸಲಾಗಿದ್ದು, ಗ್ರಾಹಕರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲಾಗಿದೆ.<br><br>ಗ್ರಾಹಕರ ಮನೆಗಳಿಗೆ ಸಿಲಿಂಡರ್ ತಲುಪಿಸುವ ಡೆಲಿವರಿ ಸಿಬ್ಬಂದಿ/ಶೋರೂಂ ಸಿಬ್ಬಂದಿ ಹಾಗೂ ಪೆಟ್ರೋಲ್ ಬಂಕ್ ಸಿಬ್ಬಂದಿಗಳಿಗೆ ಪಾಸ್‌ಗಳನ್ನು ನೀಡಲಾಗಿತ್ತು.<br><br>ಲಾಕ್‌ಡೌನ್ ಅವಧಿಯಲ್ಲಿ ಪೆಟ್ರೋಲ್ ಬಂಕ್ ಎಲ್.ಪಿ.ಜಿ ಗ್ಯಾಸ್ ಏಜೆನ್ಸಿಗಳನ್ನು ತೆರೆದು ಎಲ್.ಪಿ.ಜಿ. ಸಿಲಿಂಡರ್‌ಗಳನ್ನು ವಿತರಿಸಲು ಅನುಮತಿ ನೀಡಲಾಗಿತ್ತು.<br><br>ಪೆಟ್ರೋಲ್ ಬಂಕ್/ಎಲ್.ಪಿ.ಜಿ. ವಿತರಣೆಯು ಕಡ್ಡಾಯ ಸೇವೆಯಾದ್ದರಿಂದ ಲಾಕ್‌ಡೌನ್ ನಿಯಮದಿಂದ ವಿನಾಯಿತಿ ನೀಡಿ ಸರ್ಕಾರವು ಆದೇಶಿಸಿರುತ್ತದೆ. |
| ಆ) | ಕಡ್ಡಾಯ ಸೇವೆಯಾದ ಕಾರಣ ಅವರ ಸೇವೆಯನ್ನು ಸರ್ಕಾರ ಗುರುತಿಸಿದೆಯೇ; | ಹೌದು. |
| ಇ) | ಲಾಕ್‌ಡೌನ್ ಸಮಯದಲ್ಲಿ ಗ್ಯಾಸ್ ಕಂಪನಿಯ ಕಾರ್ಮಿಕರು ಮತ್ತು ವಾಹನ ಚಾಲಕರು ತಮ್ಮ ಜೀವನದ ಹಂಗು ತೊರೆದು ಕಾರ್ಯ ನಿರ್ವಹಿಸುತ್ತಿದ್ದು, ಅವರಿಗೆ ಸರ್ಕಾರದಿಂದ ಸೌಲಭ್ಯಗಳನ್ನು ನೀಡಲಾಗಿದೆಯೇ; | ಲಾಕ್ ಡೌನ್ ಸಮಯದಲ್ಲಿ ತೈಲ ಕಂಪನಿಗಳು ಎಲ್ಲಾ ಪೆಟ್ರೋಲ್ ಬಂಕ್/ ಅನಿಲ ಸಿಲಿಂಡರ್ ವಿತರಣಾ (ಡೆಲಿವರಿ) ಸಿಬ್ಬಂದಿಗಳಿಗೆ ಫೇಸ್ ಮಾಸ್ಕ್/ಫೇಸ್ ಶೀಲ್ಡ್, ಸ್ಯಾನಿಟೈಸರ್, ಊಟ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಿರುತ್ತವೆ ಹಾಗೂ ಅನಿಲ ಸ್ಥಾವರಗಳನ್ನು ಪೂರ್ಣವಾಗಿ ಸ್ಯಾನಿಟೈಸ್ ಮಾಡಿಸಿ ಮತ್ತು ಅನಿಲ ಸ್ಥಾವರದ ಪ್ರವೇಶ ದ್ವಾರದಲ್ಲಿ ಸಿಲಿಂಡರ್ ಟ್ರಕ್‌ಗಳ ಸಂಪೂರ್ಣ ಸ್ಯಾನಿಟೈಸ್ ಮಾಡುವ ವ್ಯವಸ್ಥೆ ಮಾಡಲಾಗಿರುತ್ತದೆ. |
| ಈ) | ಗ್ಯಾಸ್ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಲೀಕರಿಗಾಗಲಿ ಮತ್ತು ಕಾರ್ಮಿಕರಿಗಾಗಲಿ ವಿಮೆ ಮಾಡಿಸಲಾಗಿದೆಯೇ; | ಈ ಬಗ್ಗೆ ತೈಲ ನಿಗಮಗಳ ಹಂತದಲ್ಲಿ ಕ್ರಮವಹಿಸಲಾಗಿರುತ್ತದೆ. ಕರೋನಾ ವೈರಾಣು ಸೋಂಕಿನಿಂದ ತೈಲ ಕಂಪನಿಯ ಸಿಬ್ಬಂದಿಗಳು ಅಕಸ್ಮಾತ್ ಮೃತ ಪಟ್ಟಲ್ಲಿ ರೂ.5.00 ಲಕ್ಷ ಹಣವನ್ನು ವಾರಸುದಾರರಿಗೆ ಪಾವತಿಸಲು ತೈಲ ಕಂಪನಿಗಳ ವತಿಯಿಂದ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಉ) | ಗ್ಯಾಸ್ ಕಂಪನಿಯವರಿಗೆ ಆಗುವ ತೊಂದರೆಗಳನ್ನು ಯಾವ ಕಾಲಮಿತಿಯೊಳಗೆ ಬಗೆಹರಿಸಿ, ಸೂಕ್ತ ಸೌಲಭ್ಯಗಳನ್ನು ಒದಗಿಸಲಾಗುವುದು? | ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ತೈಲ ಕಂಪನಿಗಳೊಂದಿಗೆ ಸಮನ್ವಯ ಸಾಧಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಿರುತ್ತವೆ. |

ಸಂಖ್ಯೆ: ಆನಾಸ 92 ಎಫ್.ಪಿ.ಪಿ 2020 (ಇ-ಆಫೀಸ್)

(ಕೆ. ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು